ದಿನಾಂಕ 24.10.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು : ಶ್ರೀ ಹೆಚ್.ಡಬ್ಲ್ಯೂ.ಎ ವಕೀಲರಿಂದಃ**

ರಾಮಕೃಷ್ಣಪ್ಪರವರಿಂದ ಯಾವ ವರ್ಷ ಸಾಲ ಪಡೆಯಲಾಗಿತ್ತು ಎಂದರೆ ೧೯೮೫ ನೇ ಸಾಲಿನಲ್ಲಿ ಎನ್ನುತ್ತಾರೆ. ಯಾರು ಎಷ್ಟು ಸಾಲವನ್ನು ಪಡೆದಿದ್ದರು ಎಂದರೆ ಸೋಮಶೇಖರಪ್ಪ, ನಾಗಣ್ಣ, ಕ್ಯಾತಮ್ಮ, ಗುರುಲಿಂಗಪ್ಪ ಮತ್ತು ನಾನು ಸಾಲ ಪಡೆದಿದ್ದೇವು. ನಾವು ಒಟ್ಟು ೬ ಜನ ಸೇರಿ ೫೦ ಸಾವಿರ ಸಾಲ ಪಡೆದಿದ್ದೇವು. ಇದರ ಬಾಬ್ತು ಜಮೀನು ಬರೆದುಕೊಟ್ಟಿದ್ದು, ಬೇರೆ ದಾಖಲೆ ಬರೆದುಕೊಟ್ಟಿಲ್ಲ. ಬಡ್ಡಿಯನ್ನು ಸಹ ನೀಡಿರುತ್ತೇನೆ. ಬಡ್ಡಿ ಹಣ ಪಡೆದಾಗ ಅವರೇ ತಮ್ಮ ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದರು, ನಮ್ಮ ಬಳಿ ಯಾವುದೇ ದಾಖಲೆ ಇಲ್ಲ. ಹಣವನ್ನು ರಾಮಕೃಷ್ಣಪ್ಪರವರಿಗೆ ಹಿಂದಿರುಗಿಸಿದ್ದೇವೆ, ದಿನಾಂಕ ನೆನಪಿಲ್ಲ. ಈ ರೀತಿ ಹಣ ನೀಡಿ ಇಲ್ಲಿಗೆ ಎಷ್ಟು ವರ್ಷಗಳಾಗಿವೆ ಎಂದರೆ ಸುಮಾರು ೧೪-೧೫ ವರ್ಷಗಳಾಗಿವೆ. ನಾವು ೧೯೮೫ ನೇ ಸಾಲಿನಲ್ಲಿ ಹಾಗೂ ಹನುಮಂತಪ್ಪ ಮತ್ತು ಈರಣ್ಣ ೧೯೮೭ ನೇ ಸಾಲಿನಲ್ಲಿ ಕ್ರಯಪತ್ರ ಬರೆದುಕೊಟ್ಟಿದ್ದರು. ಸಾಲವನ್ನು ರಾಮಕೃಷ್ಣಪ್ಪ ತೀರಿಕೊಳ್ಳುವ ಎಷ್ಟು ವರ್ಷ ಮೊದಲು ತೀರಿಸಿದ್ದೀರಿ ಎಂದರೆ ಕ್ರಯ ಪತ್ರ ಬರೆಸಿಕೊಳ್ಳುವ ಸುಮಾರು ೩-೪ ವರ್ಷಗಳ ಹಿಂದೆ ಸಾಲ ತೀರಿಸಿದ್ದೇವೆ. ನಮ್ಮ ಮತ್ತು ರಾಮಕೃಷ್ಣಪ್ಪ ನಡುವೆ ಸಾಲದ ವ್ಯವಹಾರ ಇರಲಿಲ್ಲ ಬದಲಾಗಿ ಜಮೀನನ್ನು ಅವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಕ್ರಯ ಪತ್ರದ ಪ್ರಕಾರ ರಾಮಕೃಷ್ಣಪ್ಪನವರ ಹೆಸರಿಗೆ ಖಾತೆ ವರ್ಗಾವಣೆಗೊಂಡಿತ್ತು ಎಂದರೆ ಸರಿ. ಖಾತೆ ವರ್ಗಾವಣೆಯ ನಂತರ ಜಮೀನು ೫ ರಿಂದ ೬ ಸಬ್ ನಂಬರ್‌ಗಳಾಗಿದ್ದವು ಎಂದರೆ ನಾವು ಕ್ರಯಕ್ಕೆ ಮರಳಿ ಪಡೆದುಕೊಳ್ಳುವ ಕಾಲಕ್ಕೆ ಸ್ವಾಧೀನದಂತೆ ನಕ್ಷೆ ಮಾಡಿಸಿಕೊಂಡು ಖರೀದಿಸಿದ್ದೇವೆ. ರಾಮಕೃಷ್ಣಪ್ಪರವರು ಖರೀದಿಸಿದ ನಂತರ ಜಮೀನುಗಳು ಅನೇಕ ಪೋಡುಗಳಾಗಿವೆ ಎಂದರೆ ಸರಿಯಲ್ಲ. ಕ್ರಯಕ್ಕೆ ಕೊಡುವ ಕಾಲಕ್ಕೆ ಮರಳಿ ಕ್ರಯಕ್ಕೆ ಕೊಡುವ ಲಿಖಿತ ಒಪ್ಪಂದ ಮಾಡಿಕೊಂಡಿರಲಿಲ್ಲ, ಆದರೆ ಮೌಖಿಕವಾಗಿ ಒಪ್ಪಿದ್ದೇವು. ರಾಮಕೃಷ್ಣಪ್ಪರವರಿಗೆ ಖಾತೆ ವರ್ಗಾವಣೆಗೆ ನಾವು ಯಾವುದೇ ತಕರಾರು ಮಾಡಿರಲಿಲ್ಲ. ಮಾರಾಟ ಮಾಡಿದವರ ಪೈಕಿ ನಾನು ಒಬ್ಬ ಮಾತ್ರ ಮರಳಿ ಕ್ರಯಪತ್ರ ಬರೆಸಿಕೊಂಡಿದ್ದೇನೆ ಎಂದರೆ ಎಲ್ಲರೂ ಬರೆಸಿಕೊಂಡಿದ್ದೇವೆ. ಉಳಿದ ಖರೀದಿದಾರರು ನಮ್ಮ ವಂಶಕ್ಕೆ ಸೇರಿದವರಲ್ಲ ಎಂದರೆ ಸರಿಯಲ್ಲ. ನಾವು ಮತ್ತು ೧ನೇ ಪ್ರತಿವಾದಿ

ಶಾಮೀಲಾಗಿ ವಾದಿಯ ಹಿಸ್ಸೆಯನ್ನು ಕಬಳಿಸುವ ಉದ್ದೇಶದಿಂದ ನಿ.ಪಿ.೪೨ ರಿಂದ ೫೦ ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ರಾಮಕೃಷ್ಣಪ್ಪ ಮೃತಪಟ್ಟ ನಂತರ ವಾದಿ ಮತ್ತು ೧ನೇ ಪ್ರತಿವಾದಿ ಜಂಟಿ ಹಕ್ಕು ಮತ್ತು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ವಾದಿಗಳ ಹಿಸ್ಸೆಯನ್ನು ಮೋಸ ಮಾಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.೪೨ ರಿಂದ ೫೦ ರ ಅಡಿಯಲ್ಲಿ ಸಂಪೂರ್ಣ ಹಕ್ಕು ಸ್ವಾಧೀನ ಲಭಿಸುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ</u>

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.